ಆ) ಹಾಗಿದ್ದಲ್ಲಿ, ಪುನರ್ ಸರ್ವೆ ಕಾರ್ಯದಲ್ಲಿ ರೈತರ ಜಮೀನಿನ ಅಳತೆ ಮತ್ತು ಹೆಸರುಗಳ ವ್ಯತ್ಯಾಸದಿಂದಾಗಿ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಲೋಪದೋಷಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಈ ಲೋಪದೋಷಗಳನ್ನು ಸರಿಪಡಿಸಲು ಸರ್ಕಾರಕ್ಕೆ ಎಷ್ಟು ಕಾಲಾವಕಾಶ ಬೇಕಾಗುತ್ತದೆ (ಪೂರ್ಣ ಮಾಹಿತಿ ನೀಡುವುದು)?

ಶ್ರೀ ಕರುಣಾಕರರೆಡ್ಡಿ (ಕಂದಾಯ ಸಚಿವರು)

ಅ) ಮದ್ದೂರು ತಾಲ್ಲೂಕು ಆತಗೂರು ಹೋಬಳಿಯ ರೈತರ ಜಮೀನುಗಳ ಪುನರ್ ಸರ್ವೆ ಕಾರ್ಯ ಮುಗಿದಿದ್ದು, ಜಿಲ್ಲಾಧಿಕಾರಿಗಳು ಮಂಡ್ಯ ಜಿಲ್ಲೆ, ಮಂಡ್ಯರವರ ಅಧಿಕೃತ ಜ್ಞಾಪನ ಸಂಖ್ಯೆ: ಸಿಎಲ್‌ಆರ್ 69/2003–04ರ ಮೇರೆಗೆ ದಿನಾಂಕ 9–2–2009ರಿಂದ ಆರ್.ಟಿ.ಸಿ. ಮತ್ತು ಇತರೆ ಭೂದಾಖಲೆಗಳನ್ನು ಸಾರ್ವಜನಿಕರಿಗೆ ವಿತರಿಸಲಾಗುತ್ತಿದೆ.

ಆ) ಬಂದಿದೆ.

ಇ) ಮದ್ದೂರು ತಾಲ್ಲೂಕು, ಆತಗೂರು ಹೋಬಳಿಯ ರೀಸರ್ವೆ ಕಾರ್ಯದಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸಲು ಆಯುಕ್ತರು, ಭೂಮಾಪನ ಇಲಾಖೆ ಇವರು ದಿನಾಂಕ 18–5–2010ರಂದು ಸಭೆ ಕರೆದು ಚರ್ಚಿಸಿದ್ದು, ತಹಶೀಲ್ದಾರ್ ಕಛೇರಿ, ಮದ್ದೂರು ಇಲ್ಲಿಗೆ ಹೆಚ್ಚುವರಿಯಾಗಿ ಭೂಮಾಪಕರನ್ನು ನೇಮಕ ಮಾಡಲಾಗಿದೆ. ಈವರೆಗೆ ಒಟ್ಟು 2750 ವಿವಿಧ ಬಗೆಯ ಪ್ರಕರಣಗಳಲ್ಲಿ 571 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ. ಉಳಿದ ಪ್ರಕರಣಗಳನ್ನು ಶೀಘ್ರ ವಿಲೇವಾರಿಗೊಳಿಸಲು ಗುರಿ ನಿಗದಿತ ವಿಲೇವಾರಿಗೆ ಸೂಚನೆ ನೀಡಲಾಗಿದೆ.

ಈ) ರೀಸರ್ವ್ ಕಾರ್ಯದಲ್ಲಿ ಆಗಿರುವ ಲೋಪದೋಷಗಳನ್ನು ನಿಯಮಾನುಸಾರ ಸುಮಾರು ಆರು ತಿಂಗಳಲ್ಲಿ ಇತ್ಯರ್ಥಗೊಳಿಸಲಾಗುವುದು.

ಅಕ್ರಮ–ಸಕ್ರಮ ಸಮಿತಿ ರಚನೆ

59(339) ಶ್ರೀಮತಿ ಖಾದರ್ ಯು.ಟಿ. (ಮಂಗಳೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮ ಸಕ್ರಮ ಸಮಿತಿಗಳನ್ನು ರಚಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಸಮಿತಿಯ ಸದಸ್ಯರುಗಳು ಯಾರು ಯಾರು; ಯಾವ ಸಮಾಜದ ಜನತೆಗೆ ಅವಕಾಶ ಕಲ್ಪಿಸಲಾಗಿದೆ;

ಇ) ಮಂಗಳೂರು ವಿಧಾನ ಸಭಾ ಕ್ಷೇತ್ರದ ಅಕ್ರಮ ಸಕ್ರಮ ಸಮಿತಿಯನ್ನು ಯಾವಾಗ ರಚಿಸಲಾಗುವುದು?

ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯ 5 ತಾಲ್ಲೂಕುಗಳ ಪೈಕಿ ಈವರೆಗೆ ಪುತ್ತೂರು, ಬೆಳ್ತಂಗಡಿ, ಸುಳ್ಯ ಈ ಮೂರು ತಾಲ್ಲೂಕಿನಲ್ಲಿ ಅಕ್ರಮ ಸಕ್ರಮ ಸಮಿತಿ ರಚನೆಯಾಗಿರುತ್ತದೆ.

ಆ) ಅನುಬಂಧದಲ್ಲಿ ನೀಡಲಾಗಿದೆ.

ಇ) ಸದ್ಯದಲ್ಲಿಯೇ ರಚಿಸಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

ಕ್ರ ಸಂ.	ತಾಲ್ಲೂಕು	ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳ ಹೆಸರು ಮತ್ತು ವಿಳಾಸ	ಅಧ್ಯಕ್ಷರು/ ಸದಸ್ಯರು	ಯಾವ ಸಮಾಜದ ಜನತೆಗೆ ಅವಕಾಶ ಕಲ್ಪಿಸಲಾಗಿದೆ
1	ಪುತ್ತೂರು	1) ಶ್ರೀಮತಿ ಮಲ್ಲಿಕಾ ಪ್ರಸಾದ್, ಮಾನ್ಯ ಶಾಸಕರು, ಪುತ್ತೂರು ವಿಧಾನ ಸಭಾ ಕ್ಷೇತ್ರ	ಅಧ್ಯಕ್ಷರು	
		2) ಶ್ರೀ ಸೋಮನಾಥ ಬಿನ್ ಕೊರಗ ಕನ್ಯಾಮಂಗಲ ಮನೆ, ಪುಣ್ಣಪಾಡಿ ಗ್ರಾ, ಪುತ್ತೂರು ತಾಲ್ಲೂಕು	ಸದಸ್ಯರು	ಪ.ಜಾತಿ
		3) ಶ್ರೀನನ್ಯ ಅಚ್ಚುತ ಮೂಡೆತ್ತಾಯ, ಬಿನ್ ಸುಬ್ರಾಯ ಮೂಡತ್ತಾಯ, ಮಾಡ್ನೂರು ಗ್ರಾಮ, ಪುತ್ತೂರು	ಸದಸ್ಯರು	ಬ್ರಾಹ್ಮಣ

		4) ಶ್ರೀಮತಿ ಬೇಬಿ ಸದಾನಂದ ಕೋಂ ಸದಾನಂದ, ಕುಂಡಡ್ಕ ಮನೆ, ನೆಲ್ಯಾದಿ ಅಂಚೆ, ಕೌಕ್ರಡಿ ಗ್ರಾಮ, ಪುತ್ತೂರು ತಾಲ್ಲೂಕು	ಸದಸ್ಯರು	ಗೌಡ
		5) ತಹಶೀಲ್ದಾರ್, ಪುತ್ತೂರು ತಾಲ್ಲೂಕು	ಕಾರ್ಯದರ್ಶಿ	
2.	ಬೆಳ್ತಂಗಡಿ	1) ಶ್ರೀ ಕೆ. ವಸಂತ ಬಂಗೇರ, ಮಾನ್ಯ ಶಾಸಕರು ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರ	ಅಧ್ಯಕ್ಷರು	
		2) ಶ್ರೀ ಜೆ. ನಾರಾಯಣಚಾರ್ ಬಿನ್ ಚಂದ್ರಯ್ಯ ಆಚಾರ್, ಪಾಂಡೇಶ್ವರ ಮನೆ, ಕುವೆಟ್ಟು ಗ್ರಾಮ, ಗುರುವಾಯನಕೆರೆ ಅಂಚೆ, ಬೆಳ್ತಂಗಡಿ ತಾಲ್ಲೂಕು	ಸದಸ್ಯರು (ಸಾಮಾನ್ಯ)	ವಿಶ್ವಕರ್ಮ
		3) ಶ್ರೀ ಶಾರದಾ ಆರ್.ರೈ. ಕೋಂ ರಾಜೀವ ರೈ, ಶ್ರೇಯಾ, ಮುಗೆರೋಡಿ ಮನೆ, ಕಣಿಯಾರು ಗ್ರಾಮ ಮತ್ತು ಅಂಚೆ, ಬೆಳ್ತಂಗಡಿ ತಾಲ್ಲೂಕು	ಸದಸ್ಯರು (ಮಹಿಳೆ)	ಬಂಟ
		4) ಶ್ರೀ ಕೊರಗಪ್ಪ ನಾಯ್ಕ ಬಿನ್ ಬಾಬು ನಾಯ್ಕ, ಹೊಸಕಾಪು ಮನೆ, ಮುಂಡಾಜೆ ಗ್ರಾಮ ಮತ್ತು ಅಂಚೆ, ಬೆಳ್ತಂಗಡಿ ತಾಲ್ಲೂಕು	ಸದಸ್ಯರು (ಪ.ಪಂಗಡ)	ಮರಾಠಿ ನಾಯ್ಕ
		5) ತಹಶೀಲ್ದಾರ್, ಬೆಳ್ತಂಗಡಿ ತಾಲ್ಲೂಕು	ಕಾರ್ಯದರ್ಶಿ	
3	ಸುಳ್ಯ	1) ಶ್ರೀ ಅಂಗಾರ ಎಸ್. ಮಾನ್ಯ ಶಾಸಕರು ಸುಳ್ಯ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು	

		2) ಶ್ರೀ ಎಸ್.ಎನ್. ಮನ್ಮಥ ಬಿನ್ ಶೇಶಪ್ಪ ಗಥ, ಕೊಪ್ಪತಡ್ಕ ಮನೆ, ಐವರ್ನಾಡು ಗ್ರಾಮ, ಸುಳ್ಯ ತಾಲ್ಲೂಕು	ಸದಸ್ಯರು	ಗೌಡ
		3) ಶ್ರೀ ಲೋಕೇಶ್ ಬಿನ್ ಶಿವಪ್ಪ ನಾಯ್ಕ, ತೋಟ ಥಾವಡಿ ಮನೆ, ಮರ್ಕಂಜ ಗ್ರಾಮ, ಸುಳ್ಯ ತಾಲ್ಲೂಕು	ಸದಸ್ಯರು	ಪರಿಶಿಷ್ಟ ಪಂಗಡ (ಎಸ್.ಟಿ)
		4) ಶ್ರೀಮತಿ ವಸಂತಿ ಪೈಕೋಂ ವೆಂಕಟೇಶ್ ಪೈ, ಬಾಜೋಡಿ ಮನೆ, ಕೊಡಿಯಾಲ ಗ್ರಾಮ, ಸೂಳ್ಯ	ಸದಸ್ಯರು	ರಾಜಪುರಿ
		5) ತಹಶೀಲ್ದಾರ್, ಸುಳ್ಯ	ಕಾರ್ಯದರ್ಶಿ	

ವಿಶೇಷ ಆರ್ಥಿಕ ವಲಯ

60(340) ಶ್ರೀ ಖಾದರ್ ಯು.ಟಿ. (ಮಂಗಳೂರು) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ವಿಶೇಷ ಆರ್ಥಿಕ ವಲಯ (SEZ) ದಲ್ಲಿ ಎಷ್ಟು ಕಂಪೆನಿಗಳಿಗೆ ಸ್ಥಳಗಳನ್ನು ಮಂಜೂರು ಮಾಡಲಾಗಿದೆ;

ಆ) ಯಾವ ಯಾವ ಕಂಪನಿಗಳು ಸ್ಥಳಾವಕಾಶವನ್ನು ಕೋರಿ ಅರ್ಜಿ ಸಲ್ಲಿಸಿರುವರು;

ಇ) ಮಂಜೂರಾತಿ ಪಡೆದ ಕಂಪನಿಗಳು ಯಾವುವು; ಈ ಕಂಪನಿಗಳು ಯಾವ ಉದ್ದೇಶಕ್ಕಾಗಿ ಅರ್ಜಿ ಸಲ್ಲಿಸಿದ್ದವು;

ಈ) SEZ ನಲ್ಲಿ ಜಾಗ ಪಡೆದು ಇದುವರೆವಿಗೂ ಕಂಪನಿ ಸ್ಥಾಪಿಸದೇ ಇರುವ ಕಂಪನಿಗಳು ಯಾವುವು;

ಉ) ಈ ಸ್ಥಾಪಿತ ಕಂಪನಿಗಳಿಂದ ಎಷ್ಟು ಜನಕ್ಕೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ; (ವಿವರ ನೀಡುವುದು)?